**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**ಸಿಸಿ 6296/ 2021**

| | | | |
|---|---|---|---|
| ಸಾಕ್ಷಿದಾರರ ಹೆಸರು | - | ದಿಲೀಪ್ ಕುಮಾರ್ | **ಚಾ.ಸಾ.-11** |
| ತಂದೆ ಹೆಸರು | - | ಮೂರ್ತಿನಾಯಕ್ | **ಪ್ರಾ.ಸಾ.-12** |
| ವಯಸ್ಸು | - | 32 ವರ್ಷ | |
| ಉದ್ಯೋಗ | - | ಪಿ ಎಸ್ ಐ | |
| ವಾಸ ಸ್ಥಳ | - | ಅರಸೀಕೆರೆ | |

ದಿನಾಂಕಃ 04.02.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅಭಿಯೋಜನೆಯ ಪರಃ ಎ ಪಿ ಪಿ ರವರಿಂದಃ**

ನಾನು ದಿನಾಂಕಃ 04.11.2020 ರಿಂದ 28.02.2021 ರವರೆಗೆ ಮದ್ದೂರು ಪೋಲೀಸ್ ಠಾಣೆಯಲ್ಲಿ ಪೋಲೀಸ್ ಸಬ್ ಇನ್ಸ್ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕಃ 13.01.2021 ರಂದು, ಮದ್ದೂರು ತಾಲ್ಲೂಕಿನ ಇ ಓ ರವರು ನನಗೆ ಒಂದು ನಿವೇದನೆಯನ್ನು ನೀಡಿರುತ್ತಾರೆ. ದಿನಾಂಕಃ 16.01.2021 ರಂದು ನಗರಕೆರೆ ಗ್ರಾಮದ ಹಳೇ ಸರ್ಕಾರಿ ಶಾಲೆಯ ಪಶ್ಚಿಮ ದಿಕ್ಕಿನಲ್ಲಿರುವ ರಸ್ತೆಯ ಒತ್ತುವರಿಯನ್ನು ತೆರವುಗೊಳಿಸಬೇಕು, ಅದರ ಸಂಬಂಧ ಸೂಕ್ತ ಬಂದೋಬಸ್ತ್ ನ್ನು ನೀಡುವಂತೆ ನನಗೆ ತಿಳಿಸಿರುತ್ತಾರೆ. ನಂತರ ನಾನು, ನಮ್ಮ ಮೇಲಾಧಿಕಾರಿಗಳಿಗೆ ಮಾಹಿತಿಯನ್ನು ನೀಡಿ ನಾನು ಮತ್ತು ನಮ್ಮ ಸಿಬ್ಬಂದಿಗಳು, ನಗರಕೆರೆ ಗ್ರಾಮಕ್ಕೆ ಹೋಗಿರುತ್ತೇವೆ. ನಗರಕೆರೆ ಗ್ರಾಮದಲ್ಲಿ ಇಓ ಮತ್ತು ಅವರ ಸಿಬ್ಬಂದಿಗಳು ಇದ್ದರು, ರಸ್ತೆಯ ಒತ್ತುವರಿಯನ್ನು ತೆರವು ಮಾಡುತ್ತಿದ್ದ ಸಂದರ್ಭದಲ್ಲಿ ಅರೋಪಿ 1 ಮತ್ತು ಇತರರು ಅದಕ್ಕೆ ಅಡ್ಡಿಯನ್ನುಂಟು ಮಾಡಿರುತ್ತಾರೆ. ನಂತರ ಇ ಓ ರವರು ಠಾಣೆಗೆ ಬಂದು, ದೂರು ನೀಡಿರುತ್ತಾರೆ, ಅದರಂತೆ ಪ್ರಕರಣ ದಾಖಲಾಗಿರುತ್ತದೆ.

ಇ ಓ ರವರು ನೀಡಿರುವ ನಿವೇದನೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿ.ಪಿ 8 ಎಂದು ಗುರುತಿಸಲಾಯಿತು. ನಾನು ಈ ಕುರಿತು ಹೇಳಿಕೆಯನ್ನು ನೀಡಿರುತ್ತೇನೆ. ಆರೋಪಿತರ ಮುಖ ಪರಿಚಯ ನನಗೆ ಈಗ ಮರೆತು ಹೋಗಿರುತ್ತದೆ.

**(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಯನ್ನು ಕೋರಿದ್ದು, ಅನುಮತಿ ನೀಡಲಾಯಿತು. )**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ರವರಿಂದ**

ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿ 1 ಮತ್ತು ಇತರೇ ಆರೋಪಿತರು ಚಾ.ಸಾ. 1 ರಿಂದ 3 ಹಾಗೂ ನಿಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆಂದರೆ ಸರಿ.

**ಪಾಟೀ ಸವಾಲು ಆರೋಪಿ ಪರ ವಕೀಲರುಃ ಶ್ರೀ ಎಂ ಕೆ ಜೆ ರವರಿಂದ**

ಚಾ.ಸಾ. 1 ರವರು ಏನು ದೂರು ನೀಡಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಚಾ.ಸ. 1 ರವರು ನೀಡಿರುವ ದೂರಿನಲ್ಲಿ ದಿನಾಂಕಃ 16.01.2021 ರಂದು, ನಗರಕೆರೆ ಗ್ರಾಮದ ಪಶುಪತಿ, ಲಿಂಗಪ್ಪ, ಸತೀಶ  ಮತ್ತು ಇತರರು ಸೇರಿಕೊಂಡು, ರಸ್ತೆ ತೆರವುಗೊಳಿಸದಂತೆ ತಡೆದಿದ್ದಾರೆಂಬುದಾಗಿ ತಿಳಿಸಿರುತ್ತಾರೆ, ಇತರರು ಎಂದರೆ ಎಷ್ಟು ಜನ ಎಂದರೆ ಸುಮಾರು ಜನ ಇದ್ದರು ಎಂದು ನುಡಿಯುತ್ತಾರೆ.  ಸುಮಾರು ಜನರ ಹೆಸರು ನನಗೆ ಗೊತ್ತಿಲ್ಲ.  ಸ್ಥಳದಲ್ಲಿ ನಾನೂ ಸೇರಿಕೊಂಡು ನಮ್ಮ ಠಾಣಾ ಸಿಬ್ಬಂದಿಗಳು ಸುಮಾರು 9 ರಿಂದ 10 ಜನ ಇದ್ದೆವು.   ನಾವು ಘಟನಾ ಸ್ಥಳಕ್ಕೆ ಬೆಳಗ್ಗೆ 09.30 ರಿಂದ 10.00 ಗಂಟೆಗೆ ಹೋಗಿರುತ್ತೇವೆ. ಘಟನಾ ಸ್ಥಳಕ್ಕೆ ನಾವು ಮುಂಚಿತವಾಗಿ ಹೋಗಿರುತ್ತೇವೆ.  ಚಾ.ಸಾ. 1 ಮತ್ತು 2 ರವರು ಒತ್ತುವರಿಯನ್ನು ತೆರವುಮಾಡುತ್ತಿದ್ದ ಸಂದರ್ಭದಲ್ಲಿ ನಿಮ್ಮ ಪ್ರಕಾರ ಆರೋಪಿತರು ಅದನ್ನು ಅಡ್ಡಿಪಡಿಸಿರುತ್ತಾರೆ, ಆ ಸಮಯದಲ್ಲಿ ನೀವು ಆರೋಪಿತರನ್ನು ದಸ್ತಗಿರಿ ಮಾಡಿದ್ದೀರಾ ಎಂದರೆ  ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ.   ಆರೋಪಿತರು ನಿಮ್ಮ ಕರ್ತವ್ಯಕ್ಕೆ ಅಡ್ಡಿಪಡಿಸಿರುತ್ತಾರೆಂದು ನೀವು ದೂರು ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ.   ಆರೋಪಿತರು ಎಷ್ಟು ವಿಸ್ತೀರ್ಣದ ರಸ್ತೆಯನ್ನು ಒತ್ತುವರಿ ಮಾಡಿದ್ದಾರೆಂದು ನೀವು ದಾಖಲೆಯನ್ನು ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಎಂದು ನುಡಿಯುತ್ತಾರೆ.  ಘಟನೆ ನಡೆಯಿತೆನ್ನಲಾದ ಸಂದರ್ಭದಲ್ಲಿ  ದೇಶದಾದ್ಯಂತ ಕೊರೋನಾ ಸಾಂಕ್ರಾಮಿಕ ರೋಗ ಇತ್ತು ಎಂದರೆ ಸಾಕ್ಷಿ ನನಗೀಗ ಸರಿಯಾಗಿ ನೆನಪಿಲ್ಲ ಎಂದು ನುಡಿಯುತ್ತಾರೆ.     ಆ ಸಮಯದಲ್ಲಿ ಮಾನ್ಯ ಉಚ್ಚ ನ್ಯಾಯಾಲಯ ಯಾವುದೇ ಒತ್ತುವರಿಗಳನ್ನು ತೆರವುಗೊಳಿಸಬಾರದೆಂದು, ಆದೇಶವನ್ನು ನೀಡಿತ್ತು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.  ದಿನಾಂಕಃ 16.01.2021 ರಂದು ಚಾ.ಸಾ. 1 ಮತ್ತು 2 ರವರು ರಸ್ತೆಯನ್ನು ತೆರವುಗೊಳಿಸುತ್ತಿದ್ದಾಗ, ಆರೋಪಿತರು ಅದಕ್ಕೆ

ಅಡ್ಡಿಪಡಿಸಿರುತ್ತಾರೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಯಾವ ಸಮಯದಲ್ಲಿ ಆರೋಪಿತರು ಅಡ್ಡಿಪಡಿಸಿರುತ್ತಾರೆಂದು ಸಾಕ್ಷಿ ನನಗೆ ಸಮಯ ನೆನಪಿಲ್ಲ ಎಂದು ನುಡಿಯುತ್ತಾರೆ. ನಾವು ಆ ದಿನ ಸಂಜೆಯ ತನಕ ಸ್ಥಳದಲ್ಲಿಯೇ ಇದ್ದೆವು. ಚಾ.ಸಾ. 1 ಮತ್ತು 2 ರವರು ಆ ದಿನ ಎಷ್ಟು ಹೊತ್ತಿನ ತನಕ ಸ್ಥಳದಲ್ಲಿದ್ದರು ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ಚಾ.ಸಾ. 1 ಮತ್ತು 2 ರವರ ಸರ್ಕಾರಿ ಕೆಲಸಕ್ಕೆ ಅಡ್ಡಿಪಡಿಸದೇ ಇದ್ದರೂ ಕೂಡ ನಿಮ್ಮ ಠಾಣಾಧಿಕಾರಿಗಳು ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದಾರೆಂದರೆ ಸರಿಯಲ್ಲ. ಆರೋಪಿತರು ಅವ್ಯಾಚ್ಯ ಶಬ್ದಗಳಿಂದ ನಿಂದಿಸದೇ ಇದ್ದರೂ ಕೂಡ ನಿಂದಿಸಿದ್ದಾರೆಂದು ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದೀರೆಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಚಾ.ಸಾ. 9 ಮತ್ತು 10 ರವರನ್ನು ಹೊರತುಪಡಿಸಿ ಎಲ್ಲಾ ಸಾಕ್ಷಿದಾರರು ಸರ್ಕಾರಿ ನೌಕರರಾಗಿರುವ ಕಾರಣ ಆರೋಪಿತರಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಪ್ರಕರಣವನ್ನು ದಾಖಲು ಮಾಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ . ನಿಮ್ಮ ಹೇಳಿಕೆಯನ್ನು ಈ ಪ್ರಕರಣಕ್ಕಾಗಿ ಸೃಷ್ಟಿ ಮಾಡಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

2 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ ಮತ್ತು ಜೆ ಎಂ ಎಫ್ ಸಿ , ಮದ್ದೂರು.